# ಅಂಗೈಯಲ್ಲಿ ಅರಮನೆ

## ಬಳೆ ತೊಟ್ಟ ಕೈ...

‘ಬಳೆಗಳು ತೊಟ್ಟ ಕೈ ಪಾತ್ರೆಗಳನ್ನು ತೊಳೆದರೆ ಆ ಪಾತ್ರೆಗಳು ಪಳಪಳ ಅಂತಿರ್ತವೆ’ ಅಂದೆ ಹೆಂಡತಿಗೆ. ‘ಸರಿ ಬಿಡಿ ನಾನೇ ಪಾತ್ರೆಗಳನ್ನು ತೊಳಿತೀನಿ’ ಅಂದಳು.

ಸದ್ಯ ಪಾತ್ರೆಗಳನ್ನು ತೊಳೆಯೋದು ತಪ್ಪಿತು ಅಂತ ಖುಷಿ ಆಯಿತು. ಮರುದಿನ ನೋಡಿದರೆ... ಸಿಂಕ್ ಹತ್ತಿರ ವಿಮ್ ಬಾರ್ ಜೊತೆ ಇದ್ದವು ಕೆಲವು ಬಳೆಗಳು...!

**ವಿ. ಹೇಮಂತ ಕುಮಾರ್**



## ಉಕ್ಕಿನ ಮನುಷ್ಯ...

ಸಮಾಜ ವಿಜ್ಞಾನದ ಮೇಷ್ಟ್ರು ರಮೇಶ್ ಎಂಟನೆಯ ತರಗತಿಯ ಮಧ್ಯ ವಾರ್ಷಿಕ ಪರೀಕ್ಷೆಯಲ್ಲಿ 'ಭಾರತದ ಉಕ್ಕಿನ ಮನುಷ್ಯ ಯಾರು? ಯಾಕೆ ಕರೆಯುತ್ತಾರೆ? ಎಂಬ ಪ್ರಶ್ನೆಯನ್ನು ಎರಡು ಅಂಕಕ್ಕೆ ನೀಡಿದ್ದರು.

ಆ ಪ್ರಶ್ನೆಗೆ ಮುರಳಿ ಎಂಬ ವಿದ್ಯಾರ್ಥಿ ಬರೆದ ಉತ್ತರ ‘ಗುಜರಾತಿನಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯನ್ನು ಮೂರು ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೇಂದ್ರ ಸರ್ಕಾರ ನಿರ್ಮಾಣ ಮಾಡಿದೆ. ಇದು ಜಗತ್ತಿನ ಅತಿ ಎತ್ತರದ ಪ್ರತಿಮೆ ಆಗಿದೆ. ಏಕತೆಯ ಮೂರ್ತಿ ಎಂದು ಕರೆಯುವ ಈ ಪ್ರತಿಮೆಯನ್ನು ಉಕ್ಕಿನಿಂದ ನಿರ್ಮಾಣ ಮಾಡಿರುವುದರಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರನ್ನು ಉಕ್ಕಿನ ಮನುಷ್ಯ ಅಂತ ಕರೆಯುತ್ತಾರೆ. ಈ ಉಕ್ಕಿನ ಮನುಷ್ಯನ ಪ್ರತಿಮೆಯ ಬಗ್ಗೆ ಇನ್ನಷ್ಟು ಬರೆಯಬಹುದು. ಆದರೆ ಪ್ರಸ್ತುತ ಪ್ರಶ್ನೆಗೆ ಅಂಕಗಳು ಎರಡಕ್ಕೆ ಸೀಮಿತವಾಗಿರುವುದರಿಂದ ಇಷ್ಟು



ಸಾಕು ಅಂತ ಎನಿಸುತ್ತಿದೆ ಎಂದು ಮುರಳಿ ಬರೆದಿದ್ದ.

**ಮಲ್ಲಿಕಾರ್ಜುನ ಸುರಧೇನುಪುರ**